ಆ) ಜನಸಂಖ್ಯೆಯ ಮಾನದಂಡನೆಯ ಬಗ್ಗೆ ನಿರ್ಧಾರತೆ ಇರುವುದಿಲ್ಲ

ಇ) ದಿನಾಂಕ 25 8 1970ರಲ್ಲಿ ಈ ಪೊಲೀಸ್ ಹೊರರಾಣೆ ಪ್ರಾರಂಭಿಸಲಾಗಿದೆ

ಈ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಉ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಊ) ಉದ್ಭವಿಸುವುದಿಲ್ಲ

357 (676) ಶ್ರೀ ಹಾಲಪ್ಪ ಹೆಚ್ (ಹೊಸನಗರ) ಮಾನ್ಯ ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆ ಬಾದಾಮಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಉಪ ನಿರೀಕ್ಷಕರಾಗಲಿ ಅಥವಾ ಮುಖ್ಯ ಪೇದೆಗಳಾಗಲಿ ದೂರುಗಳನ್ನು ದಾಖಲಿಸದೇ ಕಿರುಕುಳ ನೀಡುವುದರ ಮೂಲಕ ದೂರು ನೀಡುವವರಿಂದ ಹಾಗೂ ಅಪರಾಧಿಗಳಿಬ್ಬರಿಂದಲೂ ಹಣ ಪಡೆದು ಅವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಯಾವುದೇ ನಿರ್ದಿಷ್ಟ ದೂರು ಈವರೆಗೂ ಬಂದಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

358 (838) ಶ್ರೀ ಹಾಲಪ್ಪ ಹೆಚ್ (ಹೊಸನಗರ) . ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಲಗೇರಿ–ಹಾನಕಲ್ ರಸ್ತೆಯು (ರಾ ಹೆ 26) ಹೊಸನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಸೊಡೂರಿನಿಂದ ಕಾರಣಗಿರಿಯ ವರೆಗಿನ 43 ಕಿಮೀಗಳ ಪೈಕಿ 23 ಕಿಮೀ ನಷ್ಟು ದೂರದ ರಸ್ತೆ ಏಕಪಥ (ಕಿರಿದಾದ) ರಸ್ತೆಯಾಗಿ ರುವುದರಿಂದ ದಟ್ಟಣೆಯ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,